ಶ್ರೀ ಟಿ. ಹನುಮಯ್ಯ.—ತಾವು (ಬ) ಪ್ರಶ್ನೆಗೇನೋ ಉತ್ತರ ಕೊಟ್ಟಿದ್ದೀರಿ. ಹೀಗೆ ಈ ಕೆಲಸಗಳೂ ಅಲ್ಲೆ ವರ್ಷಾಂದ್ಯಂತವೂ ಅಂದರೆ 12 ತಿಂಗಳೂ ಪೂರ್ತಿ ಕೆಲಸ ನಡೆಸಲು ಸಾಕಾಗುವಷ್ಟು ಹಣವನ್ನು ಮಂಜೂರು ಮಾಡುತ್ತೀರೋ ಅಥವಾ ಕೇವಲ ವರ್ಷದಲ್ಲಿ 3 ತಿಂಗಳು ಕೆಲಸ ಮಾಡುವಷ್ಟು ಹಣವನ್ನೊದಗಿಸಿ ಇನ್ನುಳಿದ 9 ತಿಂಗಳು ಮುಚ್ಚಿರುವ ಹಾಗೆ ಒದಗಿಸುತ್ತಿದ್ದೀರೋ ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗೆಲ್ಲಾ ಮುಚ್ಚುವುದಕ್ಕೆ ಅಲ್ಲ ಅವಕಾಶ ಕೊಡುವುದಿಲ್ಲ.

ಶ್ರೀ ಟಿ. ಹನುಮಯ್ಯ.—ಈಗ ತಾವು ಕೊಡುತ್ತಿರುವ ಹಣ ಕೇವಲ ಮೂರು ತಿಂಗಳೊಳಗಾಗಿಯೇ ಮುಗಿದು ಹೋಗುತ್ತಿದೆ ಎನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗೇನೂ ಇಲ್ಲ. ಅಲ್ಲಿ ಕೆಲಸಕಾರ್ಯಗಳು ಬಹಳ ಚೆನ್ನಾಗಿ ನಡೆಯುತ್ತಿವೆ. ಹಾಗೆ ಇನ್ನೂ ಹೆಚ್ಚಿಗೆ ಹಣ ಬೇಕಾದರೆ ಅದನ್ನೂ ಪರಿಶೀಲನೆ ಮಾಡುತ್ತೇವೆ.

ಶ್ರೀ ಟಿ. ಹನುಮಯ್ಯ.—ಈಗ ತಾವು ಕೊಡುತ್ತಿರುವ ಹಣ ಆರು ತಿಂಗಳಿಗೆ ಮುಗಿದುಹೋಗಿ ಇನ್ನಾರು ತಿಂಗಳು ಈ ಕೆಲಸಗಳೊಂದೂ ನಡೆಯುತ್ತಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ನಮ್ಮ ಗಮನಕ್ಕೆ ಬಂದಿಲ್ಲ. ಅದನ್ನು ವಿಚಾರ ಮಾಡುತ್ತೇನೆ.

Buses coming into and going out from the State.

Q.—908. **Sri MUDDURAMIAH** (Koratagere-Madhugiri).—

Will the Government be pleased to state :—

(*a*) the number of buses coming into the State from Bombay, Madras and Andhra States and the number of buses going out from the State to Bombay, Madras and Andhra States ;

(*b*) (i) the number of buses from these States which have been exempted from payment of taxes levied by the Mysore State and (ii) the number of buses from the State which have been exempted from payment of taxes in their frontiers by the above States ?

A.—**Sri H. SIDDAVEERAPPA** (Minister for Home and Industries).—

(*a*)—

	Bombay	*Madras*	*Andhra*
Coming into the State from ...	4	34	58
Going out of the State to...	8	31	55

(*b*) (i) No. of buses exempted from payment of taxes in Mysore State :—

Andhra	..	7
Bombay	...	Nil.
Madras	...	Nil.

(ii) No. of Mysore buses exempted from payment of taxes in the State of—

Andhra	...	9
Bombay	...	Nil.
Madras	...	Nil.

ಶ್ರೀ ಮುದ್ದುರಾಮಯ್ಯ.—ಈಗ ನಮ್ಮ ಮೈಸೂರು ದೇಶದೊಳಕ್ಕೆ ಆಂಧ್ರದಿಂದ ಬರತಕ್ಕಂಥ ಬಸ್ಸುಗಳವರು ಕೇವಲ ನಮ್ಮ ಸಂಸ್ಥಾನದಲ್ಲಿ 4-5 ಮೈಲಿಗಳಿಗೆ ಮಾತ್ರ ಟ್ಯಾಕ್ಸ್ ಕೊಡುತ್ತಿದ್ದರೆ ನಮ್ಮ ದೇಶದಿಂದ ಆಂಧ್ರಕ್ಕೆ ಹೋಗತಕ್ಕ ಬಸ್ಸಿನವರು 25-26 ಮೈಲಿಗಳ ಪೂರ್ತಿ ಟ್ಯಾಕ್ಸ್ ಕೊಡುತ್ತಿದ್ದಾರೆ, ಇದರಿಂದ ಎಷ್ಟು ತೊಂದರೆ ಆಗುತ್ತಿದೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

*ಶ್ರೀ ಎಚ್. ಸಿದ್ದವೀರಪ್ಪ.—ಆ ಬಗ್ಗೆ ಅರ್ಜಿಗಳೂ ಬಂದಿವೆ. ಈ ಸಂಬಂಧವಾಗಿ ಒಂದು ರೆಸಿಪ್ರೊಕಲ್ ಅರೇಂಜ್‌ಮೆಂಟನ್ನು ಮಾಡಬೇಕೆಂದು ಆಂಧ್ರ ಸರ್ಕಾರ ದೊಡನೆ ವ್ಯವಹಾರ ನಡೆಸುತ್ತಿದ್ದೇವೆ. ಬೇಗನೆ ಒಂದು ತೀರ್ಮಾನಕ್ಕೆ ಬರುವ ಸೂಚನೆಗಳಿವೆ.

ಶ್ರೀ ಮುದ್ದುರಾಮಯ್ಯ.—ಈಗ ಎರಡು ಕಡೆ ಟ್ಯಾಕ್ಸ್ ಬೀಳುತ್ತಿರುವುದರಿಂದ ಆ ಬಸ್ ಮಾಲೀಕರಿಗೆ ಬಹಳ ತೊಂದರೆ ಆಗುತ್ತಿದೆ ಎನ್ನುವುದು ತಮ್ಮ ಗಮನಕ್ಕೆ ಬಂದಿಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಆ ವಿಚಾರ ಸರ್ಕಾರದವರ ಗಮನಕ್ಕೂ ಬಂದಿದೆ. ಈ ವಿಚಾರ ಟ್ಯಾರೀಫ್ ಕಾರ್ಪೊರೇಷನಲ್ಲಿ ಕೂಡ ಚರ್ಚೆಯಾಗಿದೆ. ಒಂದು ರೆಸಿಪ್ರೊಕಲ್ ಅರೇಂಜ್‌ಮೆಂಟಿಗೆ ಬರಬೇಕೆಂದು ತೀರ್ಮಾನವಾಗಿದೆ. ಆ ಬಗ್ಗೆ ತಕ್ಕ ಕಾರ್ಯಕ್ರಮಗಳನ್ನು ಈಗಾಗಲೇ ಕೈಗೊಂಡಿದ್ದೇವೆ.

ಶ್ರೀ ಮುದ್ದುರಾಮಯ್ಯ.—ಈಗ ನಮ್ಮ ಸೀಮೆಯ ಬಸ್ ಮಾಲೀಕರು ಹೊರಗಡೆ ಸಂಸ್ಥಾನಗಳಲ್ಲಿ ಕೇವಲ 14—15 ಮೈಲಿ ಹೋದರೂ ಟ್ಯಾಕ್ಸ್ ಕೊಡಬೇಕಾಗಿರುವುದರಿಂದ ತುಂಬ ತೊಂದರೆಯಾಗುತ್ತಿದೆ ಎಂದೂ, ಆಕ್ಟಿಗೆ ವಿರುದ್ಧವಾಗಿ ಅವರು ಡಬ್ಬಲ್ ಟ್ಯಾಕ್ಸ್ ಕೊಡಬೇಕಾಗಿರುತ್ತದೆ ಎಂದು ತುಮಕೂರಿನ ಬಸ್ ಮಾಲೀಕರು ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಹಾಕಿಕೊಂಡಿದ್ದಾರೆ. ಈಗ ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ಅವರಿಗೆ ತೊಂದರೆಯಾಗುತ್ತಿದೆ. ನಾವು ಈ ಬಗ್ಗೆ ಈಗಾಗಲೇ ಆ ಬೊಂಬಾಯಿ ಮದ್ರಾಸ್ ಮತ್ತು ಆಂಧ್ರದೊಡನೆ ವ್ಯವಹಾರ ಮಾಡುತ್ತಿದ್ದೇವೆ. ಒಂದು ರೆಸಿಪ್ರೊಕಲ್ ಅರೇಂಜ್‌ಮೆಂಟಿಗೆ ಬೇಗ ಬರಬೇಕೆಂದು ತೀರ್ಮಾನ ಮಾಡಿಕೊಂಡಿದ್ದೇವೆ.

State Transport Authority (Cases disposed of and pending).

Q.—927. **Sri B. NARAYANASWAMY** (Mysore City South).—

Will the Government be pleased to state :—

(*a*) the number of appeals filed and disposed of by the State Transport